

ಶೈಲಿಯಲ್ಲಿ ಪ್ರಸಿದ್ಧರು. ಅವರು ಕಥಕಳಿ ಕಲೆಯ ವಿಕಾಸಕ್ಕೆ ಕೊಟ್ಟ ಕೊಡುಗೆ ಅಪಾರವಾದುದು. ದಕ್ಷಿಣ ಕೇರಳದಲ್ಲಿ ಕಪ್ಲಿಂಗಾಡನ್ ನಾರಾಯಣ ನಂಬೂದಿರಿ ಅವರ ಮುತುವರ್ಜಿಯಿಂದಾಗಿ ಕಥಕಳಿಯ ಸ್ವರೂಪವು ಚಂದವಾಗುತ್ತ ಹೋಯಿತು. ನಂಬೂದಿರಿ ಅವರು ತಿರುವಾಂಕೂರಿಗೆ ಹೋಗಿ ನೆಲೆಸಿದಾಗ ಅವರ ಈ ಸೃಜನಾತ್ಮಕ ಬದಲಾವಣೆಗೆ ಸಾಕಷ್ಟು ಪ್ರೋತ್ಸಾಹ ದೊರೆಯಿತು. ಅದಾಗಲೇ ಉತ್ತರ ಕೇರಳದಲ್ಲಿ ಜನಪ್ರಿಯವಾಗಿದ್ದ ಕಲ್ಲಾಡಿಕೋಡನ್ ಶೈಲಿಯು ಹಸ್ತಚಲನೆ, ಅಭಿನಯಕ್ಕೆ ಹೆಚ್ಚಿನ ಒತ್ತು ನೀಡಿದರೆ, ಕಪ್ಲಿಂಗಾಡನ್ ಶೈಲಿಯು ಭಾವಾಭಿನಯಕ್ಕೆ ಹೆಚ್ಚು ಆದ್ಯತೆ ನೀಡಿತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಕಪ್ಲಿಂಗಾಡನ್ ಶೈಲಿಯಲ್ಲಿ ಕಣ್ಣಿನ ಚಲನೆ, ಮೌಖಿಯ ಅಭಿವ್ಯಕ್ತಿಗೆ ಆದ್ಯತೆ ನೀಡಿ, ಕಲ್ಲಾಡಿಕೋಡನ್ ಶೈಲಿಯು ಹಸ್ತಚಲನೆ, ದೇಹದ ಚಲನೆಗೆ ಆದ್ಯತೆ ನೀಡಿದ್ದರ ಪರಿಣಾಮ ಕಥಕಳಿ ಕಲಾಪ್ರಕಾರ ವಿಕಾಸಗೊಳ್ಳುತ್ತಾ ಹೋಯಿತು. ಉತ್ತರ ಕೇರಳದ ಭಾಗಗಳಲ್ಲಿ ಕಪ್ಲಿಂಗಾಡನ್ ಶೈಲಿಯನ್ನು ನಿಧಾನವಾಗಿ ಸ್ವೀಕರಿಸಲಾರಂಭಿಸಿದರು. ಈ ಎರಡೂ ಶೈಲಿಗಳ ಒಳಿತುಗಳು ಸಮೀಕರಣಗೊಂಡು ಕಲ್ಲುವಳಿ ಶೈಲಿಯು ಪ್ರಬಲವಾಗುತ್ತ ಹೋಯಿತು.

**◆ ನೀವು ಹನೂಮಂತನ ಪಾತ್ರದಲ್ಲಿ ಬಹಳ ಪ್ರಸಿದ್ಧರು. ಈ ಪಾತ್ರದಲ್ಲಿ ಅಂಥ ವಿಶೇಷವೇನಿದೆ?**

ಮೇಲ್ನೋಟಕ್ಕೆ ಇದೊಂದು ಕಪಿಯ ಪಾತ್ರವೆಂದು ಅನಿಸಬಹುದು. ಆದರೆ ಮಂಗನೊಬ್ಬ ಪೂಜ್ಯನಾಗುವಷ್ಟು ಎತ್ತರಕ್ಕೆ ಏರುವಲ್ಲಿಯವರೆಗಿನ ಅಭಿನಯಕ್ಕೆ ಇಲ್ಲಿ ಅವಕಾಶಗಳಿವೆ. ಹನುಮಂತನು ಶ್ರೀರಾಮನನ್ನು ಭೇಟಿಯಾಗುವ ಸಂದರ್ಭದಲ್ಲಿ, ಸೀತಾದೇವಿಯೊಡನೆ ಆತನ ಸಂಭಾಷಣೆ, ರಾಮನೊಡನೆ ಅವನ ಸಖ್ಯ, ಭೀಮನೊಡನೆ ವಾಗ್ವಾದ... ಹೀಗೆ ಅನೇಕ ಸಂದರ್ಭಗಳಲ್ಲಿ ಹನೂಮಂತನ ಪಾತ್ರಗಳನ್ನು ನಾನು ಕಥೆಗೆ ಪೂರಕವಾಗುವಂತೆ ನಿರ್ವಹಿಸಿದ್ದೇನೆ. ಹನುಮಂತನ ಅಂತರಂಗವನ್ನು ಅಭಿನಯದಲ್ಲಿ ಅನಾವರಣ ಮಾಡುವುದು ಸವಾಲಿನ ಕೆಲಸ. ಯುದ್ಧಕ್ಷೇತ್ರಕ್ಕೆ ಹೋಗಿ ಯುದ್ಧ ಮಾಡುವುದೋ, ಶೃಂಗಾರದ ಕಥೆಯನ್ನೋ ಅಭಿನಯಿಸುವುದು ಒಂದು ತೆರನಾದರೆ, ಈ ಪಾತ್ರದಲ್ಲಿ ಅಂತರಂಗದ ಸಮರ್ಪಣೆಯ ಭಾವವನ್ನು ಅಭಿನಯದಲ್ಲಿ ಸೆರೆಹಿಡಿಯುವುದು